**ಹೆಚ್ಚುವರಿ  ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ.ನಂ.1031/2021**
**(ಸಿ.ಸಿ.ನಂ.372/2018)**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಮಹಾಬಲೇಶಪ್ಪ | ಪಿಡಬ್ಲ್ಯೂ | 1 |
| ತಂದೆ:ಗಂಡನ ಹೆಸರು | : | ಕೋಟೆಪ್ಪ | ಸಿಡಬ್ಲ್ಯೂ | 1 |
| ವಯಸ್ಸು | : | 57 ವರ್ಷ | | |
| ಉದ್ಯೋಗ | : | ಸಹಾಯಕ ಅಭಿಯಂತರರು | | |
| ವಾಸ ಸ್ಥಳ | : | ಹೊಳಲ್ಕೆರೆ | | |

**ದಿನಾಂಕ:05-01-2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು ದಿನಾಂಕ 06-05-2018 ರಂದು ಹಾನಗಲ್ಲ ತಾಲೂಕಿನ ವಿಧಾನಸಭಾ ಚುನಾವಣೆಯ ಸಂಬಂಧ ಅಕ್ಕಿಆಲೂರು ಹೋಬಳಿಗೆ flying squad ನ ಟೀಂ ಲೀಡರ್ ಆಗಿದ್ದೆ. ದಿ:06-05-2018 ರಂದು ಬೆಳಿಗ್ಗೆ 11.30 ಗಂಟೆಗೆ ನಾನು ಮಲಗುಂದ ಗ್ರಾಮದಲ್ಲಿ ಮೇಲೆ ಹೇಳಿದ ಕರ್ತವ್ಯ ನಿರ್ವಹಿಸುತ್ತಿದ್ದಾಗ ಗ್ಯಾಸ್ ಒಲೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಮಾಹಿತಿ ಬಂತು. ನಾನು, ಒಬ್ಬರು ಪಿ.ಡಿ.ಓ, ವಿಡಿಯೋಗ್ರಾಫರ್ ಮತ್ತು ಪೊಲೀಸರು ಹೋಗಿ ರಸ್ತೆಯಲ್ಲಿ ನಿಂತುಕೊಂಡೆವು. ಸಂಜೆ 4.30 ಗಂಟೆಗೆ ಒಂದು ಬೋಲೇರೋ ವಾಹನ ಬಂತು. ಅದನ್ನು ತಡೆದು ಪರಿಶೀಲಿಸಿದಾಗ ಉಜ್ವಲ ಯೋಜನೆಯ ಗ್ಯಾಸ್ ಒಲೆಗಳು ಸಿಕ್ಕಿದವು. ಸದರಿ ವಾಹನದ ಚಾಲಕನ ಬಳಿ ಗ್ಯಾಸ್ ಒಲೆಗಳ ಬಗ್ಗೆ ವಿಚಾರಿಸಿದಾಗ ಮಾಗಾವಿ ಗ್ಯಾಸ್ ಏಜೆನ್ಸಿಯವರು 15 ಒಲೆಗಳು ಕಾಮನಹಳ್ಳಿಯ ಫಲಾನುಭವಿಗಳಿಗೆ ಬಂದಿವೆ ಎಂದು ಗಂಗವ್ವ ರವರಿಗೆ ಕರೆ ಮಾಡಿ ತಿಳಿಸಿದ್ದಾರೆಂದು ಚಾಲಕ ಹೇಳಿದ. ಚಾಸಾ-2 ಮತ್ತು 3 ರವರನ್ನು ನಾನು ಮತ್ತು ಪೊಲೀಸರು ಪಂಚರಾಗಿ ಬರುವಂತೆ

ಕರೆದರು. ವಾಹನ ಚಾಲಕನ ಹೆಸರು ಪರಶುರಾಮ ಎಂದು ತಿಳಿದುಕೊಂಡೆ. 15 ಜನ ಫಲಾನುಭವಿಗಳು ಸದರಿ ವಾಹನದಲ್ಲಿಯೇ ಇದ್ದರು. ತಾವು ಎಲ್ಲರೂ ಹೋಗಿ ಗ್ಯಾಸ್ ಒಲೆಗಳನ್ನು ತಂದಿರುವುದಾಗಿ ಹೇಳಿದರು. ಸದರಿ ಗ್ಯಾಸ್ ಒಲೆಗಳು ಮತ್ತು ವಾಹನವನ್ನು ಪೊಲೀಸರು ಜಪ್ತು ಮಾಡಿಕೊಂಡರು. ಈ ಬಗ್ಗೆ 4.30 ಯಿಂದ 5.30 ಯವರೆಗೆ ಪಂಚನಾಮೆಯನ್ನು ಮಾಡಿದರು. ಅದನ್ನು ಈಗ ನೋಡುತ್ತಿದ್ದು, ನಿ ಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಭಾವಚಿತ್ರವನ್ನು ತೆಗೆಯಲಾಗಿದೆ. ಎರಡು ಭಾವಚಿತ್ರಗಳನ್ನು ಈಗ ನೋಡುತ್ತಿದ್ದು, ನಿ ಪಿ 2 ಮತ್ತು ನಿ ಪಿ 3 ಎಂದು ಗುರುತಿಸಲಾಯಿತು. ಪೊಲೀಸರು ವಾಹನ ಚಾಲಕನನ್ನು ವಶಕ್ಕೆ ಪಡೆದುಕೊಂಡು ನಾವೆಲ್ಲರೂ ಠಾಣೆಗ ಹೋದೆವು, ನಾನು ಈ ಬಗ್ಗೆ ದೂರು ಕೊಟ್ಟೆ, ಸದರಿ ದೂರನ್ನು ಈಗ ನೋಡುತ್ತಿದ್ದು, ನಿ ಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸದರಿ ಗ್ಯಾಸ್ ಒಲೆಗಳು ಸರಕಾರದ ಉಜ್ವಲ ಯೋಜನೆಯಡಿಯಲ್ಲಿ ನೀಡುವಂತಹ ಗ್ಯಾಸ್ ಒಲೆಗಳಾದ ಕಾರಣ ಚುನಾವಣಾ ನೀತಿ ಸಂಹಿತೆ ಉಲ್ಲಂಘಣೆಯಾಗಿದ್ದು, ಆ ಕಾರಣದಿಂದ ನಾನು ದೂರು ನೀಡಿದ್ದೇನೆ. ಆ ದಿನ ವಶಕ್ಕೆ ಪಡೆದ ಸದರಿ ವಾಹನದ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**(ಮುಂದುವರೆದ ಮುಖ್ಯ ವಿಚಾರಣೆ ಮಧ್ಯಾಹ್ನ 2.45 ಕ್ಕೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ

**ದಿನಾಂಕ:05-01-2022 ರಂದು ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಚುನಾವಣಾ ನೀತಿ ಸಂಹಿತೆಯನ್ನು ಮೇಲೆ ಹೇಳಿದ ವಾಹನದ ಚಾಲಕ ಮತ್ತು ಮಾಗಾವಿ ಗ್ಯಾಸ್ ಏಜೆನ್ಸಿಯೂ ಉಲ್ಲಂಘಣೆ ಮಾಡಿದೆ. ಅ ದಿನ ಜಪ್ತು ಮಾಡಿಕೊಂಡ ವಾಹನ ಮತ್ತು ಗ್ಯಾಸ್ ಒಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ತನಿಖಾಧಿಕಾರಿಯು ಮುದ್ದೆಮಾಲುಗಳನ್ನು ಹಾಜರುಪಡಿಸದೇ ಇರುವ ಕಾರಣ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ